dbC-534
T.P-2

ಗೋರಕ್ಷಣಿ
GORAKSHANA

9 ನೇ ವರ್ಷ — 1938 ನೇ ಸೆಪ್ಟೆಂಬರ್ ತಾ || 6 Sept 58

Protect the Cow ಗೋಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಜೊಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 6 ಆಣೆ ಪೋಷಕರು ರೂ 25, ಜೊಂಬಲಿಗರು ರೂ 10 (ಒಂದೇಸಾರಿ) ಮಾತ್ರ ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಗೋಸಂರಕ್ಷಣೆ

ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ಸಂದೇಶ

ಮದರಾಸು ಜೂಲೈ 1 ರಲ್ಲಿ

ಶ್ರೀ ಕಂಚಿ ಕಾಮಕೋಟಿ ಪೀಠದ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸ್ವಾಮಿಗಳವರು, ವ್ಯಾಸಪೂಜಾ ಸಮಯದಲ್ಲಿ, ಗೋರಕ್ಷಣೆ ಬಗ್ಗೆ ಒತ್ತಿಹೇಳಿದರು. "ನಾವು ಗೋಪೂಜೆ ಮಾಡುವ ಪದ್ಧತಿ ನಡೆದುಬಂದಿದ್ದರೂ, ನಮ್ಮಲ್ಲಿ ಅನೇಕರು ಗೋವುಗಳ ಬಗ್ಗೆ ಸರಿಯಾದ ರೀತಿಯಲ್ಲಿ ನೋಡುವುದಿಲ್ಲ. ಇತರ ದೇಶಗಳೊಡನೆ ಹೋಲಿಸಿದರೆ ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಹಸುಗಳಿವೆ ; ಆದರೆ ಅವು ಕೊಡುವ ಹಾಲು ತುಂಬಾ ಕಡಮೆ : ಮತ್ತು ನಾವು ಹಾಲು ಕುಡಿಯುವುದು ಪ್ರಪಂಚದಲ್ಲಿಲ್ಲಾ ತುಂಬಾ ಕಡಮೆ. ವಧೆ ಮಾಡಲ್ಪಡುವ ಬಹು ಅಂಶ ಹಸುಗಳನ್ನು ಹಿಂಬೊಗಳಿಂದ ಕಟುಕರು ಕೊಳ್ಳುತ್ತಾರೆ. ನಮ್ಮ ದೇಶದ ಆರ್ಥಿಕ ಸ್ಥಿತಿ ನೆಲೆಸಿರುವ ವಿಷಯದಲ್ಲಿ ನಮ್ಮ ಮತಧರ್ಮದ ಕರ್ತವ್ಯವನ್ನು ನಾವು ಮರೆತಿರುವೆವು. ಖರ್ಚಿಲ್ಲದೆ ಹಸುಗಳಿಗೆ ಆಹಾರ ದೊರಕಿಸುವುದೆಂದರೆ, ಸಂಸಾರದ ಸ್ತ್ರೀಯರು. ಹೋಟೆಲು ನಡೆಸುವವರು, ಹಾಸ್ಟಲು ಅಧಿಕಾರಿಗಳು, ತಮ್ಮ ಅಡಿಗೆ ಮನೆಯಲ್ಲಿ ದೊರೆಯುವ ಬಾಳೆಲೆ ಚೂರು, ಹಣ್ಣು ಮತ್ತು ತರಕಾರಿ ಸಿಪ್ಪೆ, ಅಕ್ಕಿ ತೊಳೆದ ನೀರು, ಗಂಜಿ, ಇವುಗಳನ್ನು ಪ್ರತಿ ದಿನ ಒಂದು ಶುಚಿಯಾದ ಸ್ಥಳದಲ್ಲಿ ಶೇಖರಿಸಿ ಹಸುಗಳಿಗೆ ಕೊಡಬಹುದಾಗಿದೆ ಈಗಿನ ಕಾಲದಲ್ಲಿ ಇವುಗಳನ್ನು ಬೀದಿಯಲ್ಲಿ ಎರಚಿ, ಕಾಳ್ಮೆಯುಳ್ಳ ಗುಡಿಸುವವರ ಕೆಲಸ ಹೆಚ್ಚಿಸಲಾಗುತ್ತಿದೆ. ಈ ಸಣ್ಣ ಕೆಲಸದಿಂದ ಹಸುಗಳಿಗೆ ಬಹುಮಟ್ಟಿಗೆ ಆಹಾರ ಸಂಬರಾಜಾಗಿ, ದೇಶದ ಪಶು ಸಂಪತ್ತು ಹೆಚ್ಚಲು ಅನುಕೂಲವಾಗುವುದು" ಎಂದು ಜಗದ್ಗುರುಗಳು ತಿಳಿಸಿದರು. ಮಹಾಸ್ವಾಮಿಗಳು ವ್ಯಾಸ ಪೂಜೆಯನ್ನು ನೆರವೇರಿಸಿದರು. ನಾವಿರಾರು ಮಂದಿ ಹಿಂದೂಗಳು ನೆರೆದಿದ್ದರು.

ಶ್ರೀ ಕೃಷ್ಣ ಪರಮಾತ್ಮನ ಕೃಪೆಯಿಂದ
'ಗೋರಕ್ಷಣ' ಕ್ಕೆ
9 ನೇ ವರ್ಷ ಪ್ರಾರಂಭವಾಯಿತು.

ಪಶುವೈದ್ಯ

ದನಕರುಗಳಿಗೆ ಗಂಧಕದ್ರಾವಕ ಸೇವನೆ ಆಗಿದ್ದರೆ : ಚಿಹ್ನೆಗಳು — ಬಾಯಿ ಗಂಟಲಿನಲ್ಲಿ ವ್ರಣಗಳಾಗುವವು. ತುಟಿಗಳೂದಿ ರಕ್ತ ಸುರಿಯುವುದು. ಹೊಟ್ಟೇನೋವು ನಂಗುವುದು ಶ್ರಮವಾಗುವುದು ಮಲ ಒದ್ದಿಸುವುದು ಚಿಕಿತ್ಸೆ — ಸುಣ್ಣದ ತಿಳಿನೀರು, ಸೋಡಾಉಪ್ಪು ಇವನ್ನು ನೀರಿನಲ್ಲಿ ಕಂಗಿಸಿ ಕೊಡುವದು ಸಾಂಬ್ರಾಣಿ, ಕರ್ಪೂರ, ಅಫೀಮನ್ನು ಗಂಜಿಯಲ್ಲಾಗಲಿ ಅಥವಾ ಹರಳಣ್ಣೆಯಲ್ಲಾಗಲಿ ಮಿಶ್ರಮಾಡಿ ದಿನವೊಂದಕ್ಕೆ 3-4 ಆವೃತ್ತಿ ಕೊಡುವುದು

ಇಜಕ್‌ಸಗರದಲ್ಲಿ ಭಾರತೀಯ ಪಶು ಸಂಶೋಧನಾ ಸಂಸ್ಥೆಯವರು 1958 ರ ಆಗಸ್ಟಿನಿಂದ ಪ್ರಾಣಿ ವಿಜ್ಞಾನದಲ್ಲಿ ಶಿಕ್ಷಣ ನೀಡಲು ಸ್ನಾತಕೋತ್ತರ ಕಾಲೇಜನ್ನು ಆರಂಭಿಸಿರುವರು

ನವದೆಹಲಿ 3— 57-58 ರಲ್ಲಿ ಸಂಭವಿಸಿದ 9011 ರೈಲ್ವೆ ಅಪಘಾತದಲ್ಲಿ ಪಶುಪ್ರಾಣಿಗಳ ಮೇಲೆ ರೈಲುಗಳು ಹರಿದ 1661 ಪ್ರಸಂಗ (ಅಪಘಾತಗಳಲ್ಲಿ ಪ್ರತಿ ಶತ 18.4 ರಷ್ಟು) ಗಳೂ ಸಹ ಸೇರಿರುವುವು.

ಗೋ ಭೇದಗಳೂ ಮತ್ತು ಗೋಮಯದ ಮಹಿಮೆ

ಶ್ರೀ ಪರಶಿವನು ಪಂಚಮುಖನು ಆ ಪಂಚಮುಖಗಳ ಹೆಸರುಗಳು ಯಾವುವೆಂದರೆ 1 ಸದ್ಯೋಜಾತ 2 ವಾಮದೇವ 3 ಅಘೋರ 4 ತತ್ಪುರುಷ ಮತ್ತು 5 ಈಶಾನ

ಸದ್ಯೋಜಾತ ಮುಖದಲ್ಲಿ ನಿವೃತ್ತಿ ನಾಮಕ ಕಲೆಯಿಂದ ಕಪಿಲ ವರ್ಣದ ಗೋವು ಹುಟ್ಟಿತು ಅದರ ಹೆಸರು ನಂದಿ ಈ ನಂದಿನಾಮಕ ಕಾಮಧೇನುವಿನ ಗೋಮಯದಿಂದ ಮಹದೈಶ್ವರ್ಯವೆಂಬ ವಿಭೂತಿಯು ಹುಟ್ಟಿತು

ವಾಸುದೇವ ಮುಖದಲ್ಲಿ ಪ್ರತಿಜ್ಞಾ ನಾಮಕ ಕಲೆಯಿಂದ ಕೃಷ್ಣವರ್ಣದ ಗೋವು ಹುಟ್ಟಿತು. ಅದರ ಹೆಸರು ಭದ್ರೆ ಆ ಭದ್ರೆಯ ಗೋಮಯದಿಂದ ಗೋಮಯದಿಂದ ದಿವ್ಯ ಪ್ರಕಾಶವೆಂಬ ಭಸಿತವು ಉತ್ಪನ್ನವಾಯಿತು.

ಅಘೋರ ಮುಖದಲ್ಲಿ ವಿದ್ಯಾಕಲೆಯಿಂದ ರಕ್ತವರ್ಣದ ಸುರಭಿ ಎಂಬ ಹೆಸರಿನ ಗೋವು ಹುಟ್ಟಿತು ಅದರ ಗೋಮಯದಿಂದ ಸರ್ವ ಪಾಪಹರವಾದ ಭಸ್ಮವು ಹುಟ್ಟಿತು. ತತ್ಪುರುಷ ನಾಮಕ ಮುಖದಲ್ಲಿ ಶಾಂತ ಕಲೆಯಿಂದ ಶ್ವೇತವರ್ಣದ ಸುಶೀಲೆ ಎಂಬ ಗೋವು ಹುಟ್ಟಿತು ಆ ಗೋವಿನ ಗೋಮಯದಿಂದ ಸಕಲ ವ್ಯಾಧಿಹರವೆಂಬ ಅಕ್ಷರ ಹುಟ್ಟಿತು.

ಈಶಾನ ಮುಖದಲ್ಲಿ ಶಾಂತಾತೀತ ಕಲೆಯಿಂದ ಚಿತ್ರವರ್ಣದ ಸುಮನೆ ಎಂಬ ಗೋವು ಹುಟ್ಟಿತು ಅದರ ಗೋಮಯದಿಂದ ಸರ್ವ ಭಯಹರವಾದ ರಕ್ಷೆಯು ಹುಟ್ಟಿತು

ಈ ಕಾರಣದಿಂದ ಗೋವಂಶವೇ ನಮ್ಮ ಮೇಲ್ಮೆಗೆ ಆಧಾರವಾಗಿದೆ ಆದ್ದರಿಂದ ಅವುಗಳ ರಕ್ಷಣೆಯೇ ನಮ್ಮ ಧರ್ಮ ನಮ್ಮ ಕರ್ತವ್ಯ [ಓಂ]

ಗೋರಕ್ಷಣ ಜೊಂಬಲಿಗರು

ಶ್ರೀಪರ್ಯ ಜಿ ಎಸ್ ನಾರಣ ಬಯಾರ್‌ರವರು ಗೋರಕ್ಷಣ ಪತ್ರಿಕೆ ಚಿರಕಾಲ ಬಾಳಿ, ಹೆಚ್ಚು ಹೆಚ್ಚು ಪ್ರಚಾರವಾಗಿ ಗೋಸಂತತಿ ಅಭಿವೃದ್ಧಿ ಹೊಂದಲಿ ಎಂದು ಶ್ರೀ ಹರಿಯು ಮತ್ತು ಶ್ರೀಯಾರಿಂದ ಸಹಾಯ ಗೋರಕ್ಷಣ ಬಗ್ಗೆ ಲಭಿಸಲೆಂದು ಹಾರೈಸಿ, ರೂ 5 ಗೋರಕ್ಷಣ ಪತ್ರಿಕೆಗೆ ಅರ್ಪಿಸಿರುವರು ಶ್ರೀಕೃಷ್ಣ ಪರಮಾತ್ಮನು ಇವರಿಗೆ ಸಕಲ ಸನ್ಮಂಗಳಗಳನ್ನು ದಯಪಾಲಿಸಲೆಂದು ಹಾರೈಸುತ್ತೇವೆ ಇದೇ ರೀತಿ ಹೆಚ್ಚು ಸಹಕಾರವನ್ನು ಗೋರಕ್ಷಣ ಅಪೇಕ್ಷಿಸುತ್ತದೆ

ಶ್ರೀಕೃಷ್ಣ ಜಯಂತಿ

ಮೈಸೂರು ವಾದರ ಶಾಲೆಯಲ್ಲಿನಿನ್ನೆ ಉಪಾಧ್ಯಾಯರೂ ವಿದ್ಯಾರ್ಥಿಗಳು ಸೇರಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ವಿಜೃಂಭಣೆಯಿಂದ ನೆರವೇರಿಸಿದರು ಪಾರಸಭೆ ಸದಸ್ಯರಾದ ಶ್ರೀ ಚೌಡಯ್ಯನವರು ಪ್ರಮುಖ ಅತಿಥಿಗಳಾಗಿದ್ದರು ಮುಖ್ಯೋಪಾಧ್ಯಾಯರಾದ ಶ್ರೀ ನರಸಿಂಹಾಚಾರ್ಯರು ಅತಿಥಿಗಳಿಗೂ, ಬಾಲಕರಿಗೂ, ದೇಶಕ್ಕೂ ಭಗವಂತನು ಒಳ್ಳೆಯದನ್ನು ಮಾಡಲಿ ಎಂದು ಶಾಲೆಯ ಅಭಿವೃದ್ಧಿಯನ್ನು ಕೋರಿದರು.

ಲಕ್ನೊ 5 — ಆಹಾರ ವಿಷಯದಲ್ಲಿ ಕೇಂದ್ರ ಮತ್ತು ಪ್ರಾಂತಗಳ ಜಂಟಿ ಜವಾಬ್ದಾರಿ ಇದೆಯೆಂದು ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಸಂಪೂರ್ಣಾನಂದರು ತಿಳಿಸಿದ್ದಾರೆ

ಲಕ್ನೋ 5 — ಉತ್ತರ ಪ್ರದೇಶದ ಪೂರ್ವಭಾಗದಲ್ಲಿ ಪ್ರಜಾ ಸೋಷಲಿಷ್ಟ ಪಕ್ಷ ಅನ್ನ ಸತ್ಯಾಗ್ರಹ ಆರಂಭಿಸಿದೆ 7 ಜನರ ಬಂಧನವಾಗಿದೆ

ನವದೆಹಲಿ 5 — ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರಿಗೆ 70 ವರ್ಷಗಳಾದವು

ಗೋಪಾಲನೆ

ಗೋವುಗಳ ವಿಷಯದಲ್ಲಿ ಈಗಿರುವಂತೆಯೇ ಅಶ್ರದ್ಧೆಯು ಹಿಂದೆಯೂ ಜನರಿಗೆ ಇದ್ದಿತೇ ಅಥವಾ ಅವುಗಳ ಅಭಿವೃದ್ಧಿಯ ವಿಷಯದಲ್ಲಿ ಶ್ರದ್ಧೆ ಇದ್ದಿತೇ ಎಂಬ ಪ್ರಶ್ನೆಯ ವಿಷಯದಲ್ಲಿ ಪ್ರಾಚೀನ ಪುಸ್ತಕಗಳಲ್ಲಿಯೂ, ಈಗಿನ ಕಾಲದ ಆಂಗ್ಲೇಯ ಗ್ರಂಥಗಳಲ್ಲಿಯೂ ಮತ್ತು ಇತರ ಲೇಖನಗಳಲ್ಲಿಯೂ ಏನು ಹೇಳಿರುವುದೋ ನೋಡುವುದು ಅವಶ್ಯಕವು ಮುಸ್ಲಿಂರ ಸಮಯದವರೆಗೂ ಗೋವುಗಳ ಅಸಾಧಾರಣ ಮಹತ್ವವಿದ್ದಿತು. ಹಿಂದೂಗಳ ಈಶ್ವರೀಯ ಅಪೌರುಷೇಯ ಗ್ರಂಥವು ವೇದವಾಗಿದೆ. ವೇದಗಳಲ್ಲಿ ಗೋವುಗಳ ಮತ್ತು ಎತ್ತುಗಳ ಪ್ರಶಂಸೆ ಮತ್ತು ಉಪಯೋಗದ ಸಂಬಂಧೀಯ ಮಂತ್ರಗಳು ತುಂಬಿವೆ.

ಋಗ್ವೇದದಲ್ಲಿ ಹೀಗೆ ಹೇಳಿದ—

ಗೌರ್ಮೆ ಮಾತಾ ವೃಷಭಃ ಪಿತಾ ಮೆ ದಿವಂ ಶರ್ಮ ಜಗತೀಮೇ ಪ್ರತಿಷ್ಠಾ |

ಗೋವು ನನ್ನ ತಾಯಿಯೂ ಮತ್ತು ಎತ್ತು ನನ್ನ ತಂದೆಯೂ ಆಗಿದೆ ; ಇವು ನನಗೆ ಈ ಪ್ರಪಂಚದ ಹಾಗೂ ಸ್ವರ್ಗದ ಸುಖವನ್ನು ಪ್ರದಾನ ಮಾಡುವುಗಳಾಗಲಿ.

ಅಗಾವೋ ಅಗ್ನಿಷ್ಟುತ ಭದ್ರಮರ್ಕ್ಷತ್ಸೀದಂತು ಗೋಷ್ಠೆ ರಣಯಂತ್ವಸ್ಮೆ | ಪ್ರಜಾಪತೇಃ ಪ್ರವಃರೂಪಾ ಇಹ ಸ್ಯುರಿಂದ್ರಾಯ ಪೂರ್ವೀರುಷಸೋ ದುಹಾನಾಃ ॥ (ಋಗ್ವೇದ 6-28-1)

ವಿವಿಧ ಬಣ್ಣಗಳ ಹಸುಗಳು ನಮ್ಮ ಮನೆಗಳಿಗೆ ಬಂದು ನಮಗೆ ಎಲ್ಲಾ ಬಗೆಗಳ ಕಲ್ಯಾಣವನ್ನು ಉಂಟುಮಾಡಲಿ ; ಮತ್ತು ನಮ್ಮ ಗೋಶಾಲೆಯಲ್ಲಿ ಕುಳಿತುಕೊಂಡು ಸುಖವಾಗಿರಲಿ ; ಅವು ಅನೇಕ ಗಂಡು ಹೆಣ್ಣು ಕರುಗಳನ್ನು ಉತ್ಪನ್ನ ಮಾಡಲಿ, ಮತ್ತು ಯಜ್ಞಾದಿ ಕರ್ಮಗಳಿಗಾಗಿ ಸದಾ ಹಾಲನ್ನು ಕೊಡುತ್ತಿರಲಿ.

ಯೂಯಂ ಗಾವೋ ಮೇದಯಥಾ ಕೃಶಂ ಚಿದಶ್ರೀರಂ ಚಿತ್ಕೃಣುಥಾ ಸುಪ್ರತೀಕಂ | ಭದ್ರಂಗೃಹಂ ಕೃಣುಥ ಭದ್ರವಾಚೋ ಬೃಹದ್ವೋವಯ ಉಚ್ಯತೇ ಸಭಾಸು ॥ (ಋಗ್ವೇದ 6-27-6)

ಗೋವುಗಳೇ ! ನೀವು ದುರ್ಬಲರೂ, ಕೃಶರೂ ಆದವರನ್ನು ಪುಷ್ಟರಾಗಿ ಮಾಡಿ ; ಕುರೂಪರೂ, ಕುಲಕ್ಷಣರೂ ಆದ ಪುರುಷನನ್ನು ಕೂಡಾ ಸುಲಕ್ಷಣನನ್ನಾಗಿ ಮಾಡಿ ; ನಮ್ಮ ಗೃಹಗಳನ್ನು ಮಂಗಳಮಯ ಗೊಳಿಸಿ : ದೊಡ್ಡ ದೊಡ್ಡ ಯಜ್ಞಗಳಲ್ಲಿ ಜನರು ನಿಮಗೆ ಹೆಚ್ಚು ಆಹಾರ ಮತ್ತು ತಿಂಡಿಗಳನ್ನು ಕೊಟ್ಟು ಪ್ರಸನ್ನ ಗೊಳಿಸಿಕೊಳ್ಳುವರು. (ಈ ಮಂತ್ರವು ಅಥರ್ವ ವೇದದಲ್ಲಿಯೂ ಬಂದಿದೆ).

ಪ್ರಜಾಪತಿರ್ಮಹ್ಯಮೇತಾ ರರಾಣೋ ವಿಶ್ವೈರ್ದೇವೈಃ ಪಿತೃಭಿಃ ಸಂವಿದಾನಃ | ಶಿವಾಃ ಸತೀರುಪ ನೋ ಗೋಷ್ಠ ಮಾಕಸ್ತಾಸಾಂ ವಯಂ ಪ್ರಜಯಾ ಸಂ ಸದೇಮ ॥ (ಋಗ್ವೇದ 10-169-4)

ಪ್ರಜಾಪತಿಯು ನಮಗೆ ಗೋವುಗಳನ್ನು ಕೊಡಲಿ ; ಎಲ್ಲಾ ದೇವತೆಗಳೂ ಮತ್ತು ಪಿತೃಗಳೂ ಇವರೊಂದಿಗೆ ಏಕತಮರಾಗಿ ನಮ್ಮ ಗೋಶಾಲೆಯು ಸಮೀಪದಲ್ಲಿ ಕಲ್ಯಾಣಮಯಿಗಳಾದ ಗೋವುಗಳನ್ನು ಉಪಸ್ಥಿತಗೊಳಿಸಲಿ : ನಮಗೆ ಅವುಗಳೊಂದಿಗೂ ಮತ್ತು ಅವುಗಳ ಕರುಗಳೊಂದಿಗೂ ಪ್ರೇಮ ಮತ್ತು ಮಮತೆಯ ಮೈತ್ರಿಯು ನೆಲೆಗೊಳ್ಳಲಿ ; ಅವುಗಳನ್ನು ಪಡೆದು ನಾವು ಸುಖವಂತರಾಗಿರೋಣ.

ಬೆಂಗಳೂರಿನಲ್ಲಿ ನಡೆದ ಬೇಲೂರು ಖೂನಿ ಮೊಖದ್ದಮೆಯಲ್ಲಿನ ಮೂರು ಮಂದಿ ಅಪರಾಧಿಗಳಾದ ಕೃಷ್ಣ, ಮುನಿಸಾಮಿ ಮತ್ತು ಗೋವಿಂದರೆಡ್ಡಿ ಮೈಸೂರು ಗೌರ್ನರ್ರಲ್ಲಿ ಪ್ರಾಣಭಿಕ್ಷೆ ಬೇಡಿರುವುದಾಗಿ ತಿಳಿಯಬಂದಿದೆ.

ಲಂಡನ್ 4— 1959 ನೇ ಮಾರ್ಚ್ 31 ಕ್ಕೆ ಮುಂಚಿತವಾಗಿ ಭಾರತಕ್ಕೆ ಅಮೆರಿಕೆಯ ಪೌಂಡುಗಳನ್ನು ಆರ್ಥಿಕ ಸಹಾಯ ನೀಡುವುದಾಗಿ ಬ್ರಿಟನ್ ಪ್ರಕಟಿಸಿದೆ.

ವುಡ್‌ಲಾಂಡ್ಸ್ ಜನಭರಿತ 2 ನೇ ವಾರ

ಶಿನ್ಸ

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ

ಯಹೂದಿ (ಹಿಂದಿ) YAHUDI

ನಟವರ್ಗ— ದಿಲೀಪಕುಮಾರ್, ವಿಮಾನಾಕುಮಾರಿ, ಸೊಹ್ರಾಬ್ ಮೋಡಿ
ನಿಗಾರ್ ಸುಲ್ತಾನ, ನಾಸಿರ್ ಹುಸೇನ್, ಜೀವಿ ನಾಜ್, ರೋಮಿ, ತಿವಾರಿ
ನೃತ್ಯ— ಹೆಲೆನ್, ಕಥಕ್ಕಿ, ಕಮಲಾ ಲಕ್ಷ್ಮಣ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಸ್ತುತ್ಯಾರ್ಹ 7 ನೇ ವಾರ

ಸುಂದರ ಕನ್ನಡ ಚಿತ್ರ

ಅಣ್ಣ-ತಂಗಿ

ಪಾತ್ರ— ರಾಜಕುಮಾರ್, ಬಾಲಕೃಷ್ಣ, ಈಶ್ವರಪ್ಪ, ಸರೋಜಾದೇವಿ
ಜಯಮ್ಮ, ವಿದ್ಯಾವತಿ, ನರಸಿಂಹರಾಜು [ಪ್ರತಿ ದಿನ 3 ಆಟಗಳು

ಗೋರಕ್ಷಣ, ಪ್ರಾರ್ಥನೆಯೂ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



SHAKTI

SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅಶೋಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nirata M S Krishna Rao, at the Satyavadi Press Chamarajapuram Mysore